aglasem.com

FOR KARNATAKA CLASS 12 PREPARATION

Karnataka 2nd PUC Model Question Paper 2027 for Economics (Paper 2)

EXAM	YEAR	TYPE	SUBJECT
Karnataka Class 12	2027	Sample Paper	Economics

ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6 ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003

2026-27 ನೇ ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ - 2

ವಿಷಯ: 22- ಅರ್ಥಶಾಸ್ತ್ರ **ಗರಿಷ್ಠ ಅಂಕಗಳು:** 80

ಸಮಯ: 3.00 ಗಂಟೆಗಳು **ಒಟ್ಟು ಪ್ರಶ್ನೆಗಳು:** 43

ಸೂಚನೆಗಳು: 1. ಪ್ರಶ್ನೆಗಳ ಸಂಖ್ಯೆಗಳನ್ನು ಮಾರ್ಜಿನ್‌ನಲ್ಲಿ ಸ್ಪಷ್ಟವಾಗಿ ಬರೆಯಿರಿ.

2. ಪ್ರತಿ ಪ್ರಶ್ನೆಗೆ ಉತ್ತರವು ನಿರಂತರವಾಗಿರಬೇಕು.

3. ಭಾಗ-'ಎ' ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

4. ಭಾಗ-'ಎಫ್' ನಲ್ಲಿ ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆಗಳನ್ನು ನೀಡಲಾಗಿದೆ.

ಭಾಗ - ಎ

I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. **(5x1=5)**

1. TFCಯು 200 ರೂ.ಗಳು ಮತ್ತು TVCಯು 225 ರೂ.ಗಳಿದ್ದಾಗ ಒಟ್ಟು ವೆಚ್ಚವನ್ನು ಕಂಡುಹಿಡಿಯಿರಿ.

(a) 125 (b) 225 (c) 425 (d) 25

2. ಉದ್ಯಮ ಘಟಕದ ಲಾಭವನ್ನು ಹೀಗೆ ಸೂಚಿಸಲಾಗುತ್ತದೆ.

(a) $\sum$ (b) Δ (c) $\varnothing$ (d) π

3. 'ಕೆಲಸ ಮಾಡಲು ಸಿದ್ಧವಿರುವ ಎಲ್ಲಾ ಕಾರ್ಮಿಕರು ಪೂರ್ಣ ಉದ್ಯೋಗವನ್ನು ಕಂಡುಕೊಳ್ಳುತ್ತಿದ್ದರು ಮತ್ತು ಎಲ್ಲಾ ಕಾರ್ಖಾನೆಗಳು ತಮ್ಮ ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸುತ್ತವೆ' ಎಂಬುದು

(a) ಆಧುನಿಕ ಚಿಂತನೆಯಾಗಿದೆ (b) ಸಮಕಾಲೀನ ಚಿಂತನೆಯಾಗಿದೆ

(c) ಸಾಂಪ್ರದಾಯಿಕ ಚಿಂತನೆಯಾಗಿದೆ (d) ವಸಾಹತುಶಾಹಿ ಚಿಂತನೆಯಾಗಿದೆ

4. ಯೋಜಿತ ಸಮಗ್ರ ಬೇಡಿಕೆಯು ಯೋಜಿತ ಸಮಗ್ರ ಪೂರೈಕೆಗೆ ಸಮನಾಗಿರುವ ಬಿಂದುವಿನಲ್ಲಿ

(a) ಸಮತೋಲನವಿರುತ್ತದೆ (b) ಅಸಮತೋಲನವಿರುತ್ತದೆ

(c) ಹೆಚ್ಚುವರಿ ಬೇಡಿಕೆಯಿರುತ್ತದೆ (d) ಹೆಚ್ಚುವರಿ ಪೂರೈಕೆಯಿರುತ್ತದೆ

5. ರಾಷ್ಟ್ರೀಯ ಕರೆನ್ಸಿಗಳು ಮಾರಾಟವಾಗುವ ಮಾರುಕಟ್ಟೆಯನ್ನು ಹೀಗೆ ಕರೆಯುತ್ತಾರೆ.

(a) ಸರಕುಗಳ ಮಾರುಕಟ್ಟೆ (b) ಚಿನ್ನದ ಮಾರುಕಟ್ಟೆ

(c) ವಿದೇಶಿ ವಿನಿಮಯ ಮಾರುಕಟ್ಟೆ (d) ಹಣಕಾಸು ಮಾರುಕಟ್ಟೆ

II. ಆವರಣದಲ್ಲಿರುವ ಸರಿಯಾದ ಉತ್ತರವನ್ನು ಆರಿಸಿ, ಖಾಲಿ ಬಿಟ್ಟ ಸ್ಥಳಗಳನ್ನು ಭರ್ತಿ ಮಾಡಿ. **(5x1=5)**

(ಘಟಕ/ MPC/ ವಿರುದ್ಧ/ ಹೂಡಿಕೆ/ ವ್ಯವಹಾರಗಳ/ ಹಣಕಾಸು)

6. ಸರಕೊಂದರ ಬೇಡಿಕೆಯು ಅದರ ಬೆಲೆಯೊಂದಿಗೆ _____ ದಿಕ್ಕಿನಲ್ಲಿ ಚಲಿಸುತ್ತದೆ.

7. _____ ತೆರಿಗೆಯು ಸರ್ಕಾರವು ಉತ್ಪನ್ನದ ಪ್ರತಿ ಘಟಕದ ಮಾರಾಟದ ಮೇಲೆ ವಿಧಿಸುವ ತೆರಿಗೆಯಾಗಿದೆ.

8. ಹಣವನ್ನು ಇಟ್ಟುಕೊಳ್ಳುವ ಮುಖ್ಯ ಉದ್ದೇಶವೆಂದರೆ _____ ನ್ನು ನಿಭಾಯಿಸುವುದು.

aglasem.com For more Question Papers, Sample Papers, Notes & Syllabus visit aglasem.com Page 1 of 8

9. ಗುಣಕದ ಗಾತ್ರವು _____ ನ ಮೌಲ್ಯವನ್ನು ಅವಲಂಬಿಸಿದೆ.

10. ಭಾರತದಲ್ಲಿ _____ ವರ್ಷವು ಏಪ್ರಿಲ್ 01 ರಿಂದ ಮಾರ್ಚ್ 31 ರ ವರೆಗಿರುತ್ತದೆ.

III. ಹೊಂದಿಸಿ ಬರೆಯಿರಿ. **(5x1=5)**

11.

A	B
a) ವಾಸ್ತವಿಕ ಅರ್ಥಶಾಸ್ತ್ರ	i) ಹೊಸ ಉದ್ದಿಮೆಗಳ ಆಕರ್ಷಣೆ
b) ಸರಿಸಮಾನ ಬೇಡಿಕೆ ಸ್ಥಿತಿಸ್ಥಾಪಕತ್ವ	ii) ಶಾಸನಬದ್ಧ ದ್ರವ್ಯಾನುಪಾತ
c) ಅಸಾಮಾನ್ಯ ಲಾಭದ ಸಾಧ್ಯತೆ	iii) ಕಾರ್ಯತಂತ್ರಗಳ ಕಾರ್ಯನಿರ್ವಹಣೆ
d) ತಪಶೀಲು ಪಟ್ಟಿ	iv) $\|e_D\| = 1$
e) SLR	v) ದಾಸ್ತಾನು ಚಲಕ
	vi) ರೆಪೋ

IV. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ. **(5x1=5)**

12. ಒಬ್ಬ ಅನುಭೋಗಿಗೆ 2 ಕಿತ್ತಳೆ ಹಣ್ಣುಗಳು 22 ಘಟಕಗಳಷ್ಟು ಒಟ್ಟು ತುಷ್ಟಿಗುಣವನ್ನು ಮತ್ತು 3 ಕಿತ್ತಳೆ ಹಣ್ಣುಗಳು 25 ಘಟಕಗಳಷ್ಟು ಒಟ್ಟು ತುಷ್ಟಿಗುಣವನ್ನು ನೀಡುತ್ತವೆ ಎಂದು ಭಾವಿಸಿದರೆ, ಸೀಮಾಂತ ತುಷ್ಟಿಗುಣವನ್ನು ಕಂಡುಹಿಡಿಯಿರಿ.

13. ಆದಾನಗಳನ್ನು ಶೇಕಡ 10 ರಷ್ಟು ಹೆಚ್ಚಿಸಿದಾಗ ಉತ್ಪನ್ನವು ಶೇಕಡ 10 ಕ್ಕಿಂತಲೂ ಅಧಿಕವಾಗುವ ಪ್ರತಿಫಲಗಳ ಪ್ರಮಾಣವನ್ನು ಹೆಸರಿಸಿ.

14. ಸೀಮಾಂತ ಆದಾಯವನ್ನು ವ್ಯಾಖ್ಯಾನಿಸಿ.

15. ಅನುಭೋಗಿ ಬಾಳಿಕೆಯ ಸರಕುಗಳ ಅರ್ಥ ನೀಡಿ.

16. ಸ್ವದೇಶಿ ಹಣದ ಮೌಲ್ಯ ಏರಿಕೆ ಎಂದರೇನು?

ಭಾಗ - ಬಿ

V. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 4 ವಾಕ್ಯಗಳಲ್ಲಿ ಉತ್ತರಿಸಿ. **(6x2=12)**

17. ಮಿಶ್ರ ಆರ್ಥಿಕತೆ ಎಂದರೇನು? ಒಂದು ಉದಾಹರಣೆ ಕೊಡಿ.

18. ಏಕತಾನಾತ್ಮಕ ಒಲವು ಎಂದರೇನು?

19. ಅಲ್ಪಾವಧಿ ಮತ್ತು ದೀರ್ಘಾವಧಿ ಪರಿಕಲ್ಪನೆಗಳ ಅರ್ಥ ನೀಡಿ.

20. ಪರಿಪೂರ್ಣ ಪೈಪೋಟಿ ಮಾರುಕಟ್ಟೆಯಲ್ಲಿ ಉದ್ಯಮ ಘಟಕವೊಂದು ಲಾಭವನ್ನು ಗರಿಷ್ಠಗೊಳಿಸಲು ಅಗತ್ಯವಿರುವ ಷರತ್ತುಗಳನ್ನು ತಿಳಿಸಿ.

21. ಸದಾವಕಾಶ ವೆಚ್ಚದ ಅರ್ಥವನ್ನು ಉದಾಹರಣೆ ಸಹಿತ ಬರೆಯಿರಿ.

22. GDP (ರಾಷ್ಟ್ರೀಯ ವರಮಾನ) ಮಾಪನದ ಮೂರು ವಿಧಾನಗಳನ್ನು ತಿಳಿಸಿ.

23. ವರ್ಗಾವಣೆ ಪಾವತಿ ಎಂದರೇನು? ಒಂದು ಉದಾಹರಣೆ ಕೊಡಿ.

24. MPCಯ ಮೌಲ್ಯವು 0.8 ಆದಾಗ, MPSನ ಮೌಲ್ಯ ಮತ್ತು ಹೂಡಿಕೆ ಗುಣಕದ ಮೌಲ್ಯವನ್ನು ಲೆಕ್ಕ ಹಾಕಿ.

25. ಸಾರ್ವಜನಿಕ ಸರಕು ಮತ್ತು ಖಾಸಗಿ ಸರಕುಗಳ ನಡುವಿನ ವ್ಯತ್ಯಾಸ ತಿಳಿಸಿ.

26. ಸಾಲಗಳನ್ನು ಬಂಡವಾಳ ಸ್ವೀಕೃತಿಗಳೆಂದು ಪರಿಗಣಿಸಲಾಗುತ್ತದೆ. ಏಕೆ?

ಭಾಗ - ಸಿ

VI. ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 12 ವಾಕ್ಯಗಳಲ್ಲಿ ಉತ್ತರಿಸಿ. (5x4=20)

27. ಒಂದು ಸರಳ ಆರ್ಥಿಕತೆಯಲ್ಲಿ ಕೃಷಿ ಕುಟುಂಬ, ನೇಕಾರ, ಶಿಕ್ಷಕರು ಸಂಪನ್ಮೂಲಗಳನ್ನು ಬಳಸಿ ಹೇಗೆ ತಮ್ಮ ಅಗತ್ಯ ಗಳನ್ನು ಪೂರೈಸಿಕೊಳ್ಳುತ್ತಾರೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.
28. ಬದಲಿ ಸರಕು ಮತ್ತು ಪೂರಕ ಸರಕುಗಳ ನಡುವಿನ ವ್ಯತ್ಯಾಸಗಳನ್ನು ಬರೆಯಿರಿ.
29. ಒಂದು ಉದ್ಯಮ ಘಟಕವು ಪ್ರತಿ ಚೆಂಡಿನ ಮಾರುಕಟ್ಟೆ ಬೆಲೆ 5 ರೂ. ಇದ್ದಾಗ 100 ಚೆಂಡುಗಳನ್ನು ಉತ್ಪಾದಿಸುತ್ತದೆ ಎಂದು ಭಾವಿಸೋಣ. ಪ್ರತಿ ಚೆಂಡಿನ ಬೆಲೆ 15 ರೂ.ಗೆ ಏರಿಕೆಯಾದಾಗ ಉದ್ಯಮ ಘಟಕವು 1000 ಚೆಂಡುಗಳನ್ನು ಉತ್ಪಾದಿಸುತ್ತದೆ. ಬೆಲೆ ಪೂರೈಕೆ ಸ್ಥಿತಿಸ್ಥಾಪಕತ್ವವನ್ನು ಕಂಡುಹಿಡಿಯಿರಿ.
30. ಬೆಲೆ ಮಿತಿ ಎಂದರೇನು? ರೇಖಾಚಿತ್ರದೊಂದಿಗೆ ವಿವರಿಸಿ.
31. ಸಮಗ್ರ ಅರ್ಥಶಾಸ್ತ್ರ ಮತ್ತು ಸೂಕ್ಷ್ಮ ಅರ್ಥಶಾಸ್ತ್ರದ ನಡುವಿನ ಭಿನ್ನತೆಗಳನ್ನು ಬರೆಯಿರಿ.
32. ಹಣದ ಬೇಡಿಕೆಯ ಸಟ್ಟಾ ವ್ಯಾಪಾರದ ಉದ್ದೇಶವನ್ನು ಚರ್ಚಿಸಿ.
33. ಸಮಗ್ರ ಬೇಡಿಕೆ ಬಿಂಬಕದ ಅರ್ಥವನ್ನು ಬರೆಯಿರಿ. ರೇಖಾತ್ಮಕವಾಗಿ ಅದನ್ನು ಹೇಗೆ ಪಡೆಯಬಹುದು?
34. ಸರ್ಕಾರದ ಮುಂಗಡ ಪತ್ರದ ಪಟವನ್ನು ಬರೆಯಿರಿ.
35. ಮುಕ್ತ ಆರ್ಥಿಕತೆಯ ಮೂರು ಕೊಂಡಿಗಳನ್ನು ಕುರಿತು ಬರೆಯಿರಿ.

ಭಾಗ - ಡಿ

VII.ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 20 ವಾಕ್ಯಗಳಲ್ಲಿ ಉತ್ತರಿಸಿ. (3x6=18)

36. ಬೇಡಿಕೆ ರೇಖೆಯೊಂದಿಗಿನ ಚಲನೆಗಳು ಮತ್ತು ಬೇಡಿಕೆ ರೇಖೆಯ ಪಲ್ಲಟಗಳನ್ನು ಎರಡು ರೇಖಾಚಿತ್ರಗಳೊಂದಿಗೆ ವಿವರಿಸಿ.
37. ಬದಲಾಗುವ ಪರಿಮಾಣಗಳ ನಿಯಮವನ್ನು ರೇಖಾಚಿತ್ರದ ಸಹಾಯದಿಂದ ವಿವರಿಸಿ.
38. ನಿರ್ದಿಷ್ಟ ವರ್ಷದಲ್ಲಿ ಮಾರುಕಟ್ಟೆ ಬೆಲೆಗಳಲ್ಲಿ ಒಂದು ದೇಶದ GDPಯು ರೂ. 5000 ಕೋಟಿ ಇದೆ ಎಂದುಕೊಳ್ಳೋಣ. ವಿದೇಶಗಳಿಂದ ನಿವ್ವಳ ಉತ್ಪಾದನಾಂಗ ಆದಾಯ (NFIA) ರೂ.500 ಕೋಟಿ ಇದೆ. ಸವಕಳಿ ವೆಚ್ಚ ರೂ. 450 ಕೋಟಿ ಮತ್ತು ನಿವ್ವಳ ಪರೋಕ್ಷ ತೆರಿಗೆಗಳ ಮೌಲ್ಯ (NIT) ರೂ. 300 ಕೋಟಿ ಇದೆ. ಈ ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿ.

ಅನನ್ಯತೆಗಳು	ಮೌಲ್ಯಗಳು (ಕೋಟಿ ರೂ.ಗಳಲ್ಲಿ)
GDP_{MP}	5000
GDP_{FC}	
NDP_{MP}	
NDP_{FC}	
GNP_{MP}	
GNP_{FC}	
NNP_{MP}	

39. ವಾಣಿಜ್ಯ ಬ್ಯಾಂಕುಗಳ ಠೇವಣಿ ಮತ್ತು ಸಾಲ (ಪತ್ತು) ನಿರ್ಮಾಣ ಪ್ರಕ್ರಿಯೆಯ ಮೇಲೆ ಅಕ್ಕಸಾಲಿಗ ಲಾಲಾನ ಕಥೆಯನ್ನು ಬರೆಯಿರಿ.
40. ಬದಲಾಗುವ ವಿನಿಮಯ ದರ ಪದ್ಧತಿಯಲ್ಲಿ ದೀರ್ಘಾವಧಿಯಲ್ಲಿ ಭವಿಷ್ಯದ ವಿನಿಮಯ ದರಗಳನ್ನು ಅಂದಾಜು ಮಾಡಲು ಕೊಳ್ಳುವ ಶಕ್ತಿಯ ಸಮಾನತೆಯ ಸಿದ್ಧಾಂತ (PPP)ವನ್ನು ಹೇಗೆ ಬಳಸಲಾಗುತ್ತದೆ?

ಭಾಗ -ಇ

VIII. ಈ ಕೆಳಗಿನ ಯಾವುದಾದರೂ ಎರಡು ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ. **(2x5=10)**

41. ಒಬ್ಬ ಅನುಭೋಗಿಯು ಎರಡು ಸರಕುಗಳನ್ನು ಅನುಭೋಗಿಸಲು ಬಯಸಿದ್ದು, X_1 ಸರಕಿನ ಬೆಲೆ ರೂ.5 ಮತ್ತು X_2 ಸರಕಿನ ಬೆಲೆ ರೂ. 10 ಆಗಿದೆ. ಅನುಭೋಗಿಯ ಆದಾಯ ರೂ. 200 ಆಗಿದ್ದಾಗ ಈ ಕೆಳಗಿನವುಗಳಿಗೆ ಉತ್ತರಿಸಿ.

(a) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ X_1 ಸರಕನ್ನು ಅನುಭೋಗಿಸಬಹುದು?

(b) ಅನುಭೋಗಿಯು ತನ್ನ ಸಂಪೂರ್ಣ ಆದಾಯವನ್ನು ಖರ್ಚು ಮಾಡಿ ಎಷ್ಟು ಪ್ರಮಾಣದ X_2 ಸರಕನ್ನು ಅನುಭೋಗಿಸಬಹದು?

(c) ಬಜೆಟ್ ರೇಖೆಯ ಇಳಿಜಾರು ಕೆಳಮುಖ ಅಥವಾ ಮೇಲ್ಮುಖವಾಗಿರುತ್ತದೆಯೇ?

(d) ಬಜೆಟ್ ರೇಖೆಯ ಮೇಲಿನ ಎಲ್ಲಾ ಸಂಯೋಜನೆಗಳು ಅನುಭೋಗಿಯ ಆದಾಯಕ್ಕೆ ಸಮನಾಗಿರುತ್ತವೆಯೇ ಅಥವಾ ಇಲ್ಲವೇ?

(f) ಅನುಭೋಗಿಯು X_1 ಸರಕಿನ ಹೆಚ್ಚುವರಿ ಘಟಕವನ್ನು ಪಡೆಯಲು ಬಯಸಿದರೆ X_2 ಸರಕನ್ನು ಬಿಟ್ಟುಕೊಡ ಬೇಕಾಗುತ್ತದೆ. ಇದು ಸರಿಯೇ?

42. ಈ ಕೆಳಗಿನ ಕೋಷ್ಟಕಕ್ಕೆ ಒಂದು ರೇಖಾಚಿತ್ರವನ್ನು ರಚಿಸಿ ಮತ್ತು ರೇಖಾಚಿತ್ರದಲ್ಲಿ ಸಮತೋಲನ ಬಿಂದು, ಸಮತೋಲನ ಬೆಲೆ, ಸಮತೋಲನ ಪ್ರಮಾಣ, ಅಧಿಕ ಬೇಡಿಕೆ ಹಾಗೂ ಅಧಿಕ ಪೂರೈಕೆಗಳನ್ನು ಗುರುತಿಸಿ.

P	QD	QS
1	25	5
2	20	10
3	15	15
4	10	20
5	5	25

43. ಈ ಕೆಳಕಂಡ ಕೋಷ್ಟಕದಲ್ಲಿ ಕಾಣೆಯಾದ ಮೌಲ್ಯಗಳನ್ನು ಕಂಡುಹಿಡಿಯಿರಿ.

ಉತ್ಪಾದನಾ ಹಂತಗಳು	ಒಟ್ಟು ಉತ್ಪಾದನೆ	ಮಧ್ಯಂತರ ಸರಕುಗಳ ಬಳಕೆ	ಮೌಲ್ಯ ವರ್ಧನೆ
ಗೋಧಿ (ರೈತ)	700	0	---
ಹಿಟ್ಟು (ಗಿರಣಿಯವನು)	---	700	200
ಬ್ರೆಡ್ (ಬೇಕರಿಯವನು)	1200	---	300
ಚಿಲ್ಲರೆ ಅಂಗಡಿ (ಮಾರಾಟಗಾರ)	---	1200	300
ಒಟ್ಟು ಮೌಲ್ಯ ವರ್ಧನೆ (GVA)			---

ಭಾಗ –ಎಫ್

ದೃಷ್ಠಿ ವಿಕಲ ಚೇತನ ವಿದ್ಯಾರ್ಥಿಗಳಿಗೆ ಮಾತ್ರ

42. ಮಾರುಕಟ್ಟೆ ಸಮತೋಲನ, ಸಮತೋಲನ ಬೆಲೆ, ಸಮತೋಲನ ಪ್ರಮಾಣ, ಅಧಿಕ ಬೇಡಿಕೆ ಹಾಗೂ ಅಧಿಕ ಪೂರೈಕೆಗಳ ಅರ್ಥವನ್ನು ನೀಡಿ.

43. GDP_{MP}, NDP_{MP}, GNP_{FC}, NNP_{MP} ಮತ್ತು NNP_{FC} ಗಳನ್ನು ವಿಸ್ತರಿಸಿ.

******

GOVERNEMENT OF KARNATAKA
KARNATAKA SCHOOL EXAMINATION AND ASSEMENT BOARD
6th CROSS, MALLESHWARAM, BENGALURU-560 003

2026-27 II PUC MODEL QUESTION PAPER - 2

Subject: 22 - Economics **Maximum Marks:** 80
Time: 3.00 Hours **No. of Questions:** 43

Instructions: **1. Write the question numbers legibly in the margin.**
2. Answer for the questions should be continuous.
3. For PART - 'A' questions, only the first written answers will be considered for evaluation.
4. In PART - 'F', alternative questions are given for visually challenged students.

PART - A

I. Choose the correct answer. **(5×1=5)**

1. Find the Total cost where TFC is 200 and TVC is 225.
(a) 125 (b) 225 (c) 425 (d) 25

2. A firm's profit is denoted by
a) $\sum$ b) Δ c) $\varnothing$ d) π

3. 'All the labourers who are ready to work will find employment and all the factories will be working at their full capacity', this school of thought is known as
a) Modern thought b) Contemporary thought
c) Classical thought d) Colonial thought

4. The point where ex-ante aggregate demand is equal to ex-ante aggregate supply will be
a) Equilibrium b) Disequilibrium c) Excess demand d) Excess supply

5. The market in which national currencies are traded is called
a) Goods market b) Gold market c) Foreign exchange market d) Financial market

II. Fill in the blanks by choosing correct answers from the bracket. **(5×1=5)**
(Unit/MPC/Opposite/Investment/Transactions/Financial)

6. The demand for a good moves in the _____direction of its price.

7. _____ tax is a tax that the Government imposes per unit sale of output.

8. The principal motive for holding money is to carry out _____

9. Size of the Multiplier depends on the value of _____

10. _____ year runs from 1st April to 31st March in India.

aglasem.com For more Question Papers, Sample Papers, Notes & Syllabus visit aglasem.com

III. Match the following. **(5×1=5)**

11.

A		B	
a)	Positive economics	i)	Attraction of new firms
b)	Unitary elasticity of demand	ii)	Statutory Liquidity Ratio
c)	Possibility of super-normal profit	iii)	Functioning of Mechanism
d)	Inventory	iv)	$\|e_D\| = 1$
e)	SLR	v)	Stock variable
		vi)	Repo

IV. Answer the following questions in a sentence or a word. **(5x1-5)**

12. Suppose, to a consumer 2 oranges give 22 units of total utility and 3 oranges give 25 units of total utility, calculate the marginal utility.
13. Name the Returns to scale when the output increases by more than 10%, for a 10% increase in the inputs.
14. Define Marginal Revenue.
15. Give the meaning of Consumer durables.
16. What is Appreciation of domestic currency?

PART-B

V. Answer any six of the following questions in 4 sentences each. **(6x2-12)**

17. What do you mean by Mixed economy? Give an example.
18. What is Monotonic preference?
19. Give the meaning of short-run and long-run concepts.
20. State the conditions needed for profit maximization by a firm under Perfect competition.
21. Write the meaning of Opportunity cost with example.
22. State three methods of measuring GDP (National Income).
23. What is Transfer Payment? Give an example.
24. If the value of MPC is 0.8, calculate the value of MPS and Investment Multiplier.
25. State the difference between Public goods and Private goods.
26. Borrowings are considered as Capital receipts. Why?

PART-C

VI. Answer any five of the following questions in 12 sentences each. **(5x4=20)**

27. Briefly explain, how the Family Farm, Weaver, Teacher can use their resources to fulfil their needs in a simple economy.
28. Write the differences between substitute goods and complimentary goods.

29. Assume that 100 balls are produced by the firm at the market price Rs.5 for each ball. When the price of ball rises to Rs.15, firm produces 1000 balls. Find the Price elasticity of supply?
30. What is price ceiling? Explain with the diagram.
31. Write the differences between Macro and Micro economics
32. Discuss the Speculative motive of demand for money.
33. Write the meaning of Aggregate demand function. How can it be obtained graphically?
34. Write the chart of the Government budget.
35. Write about the three linkages of Open economy.

PART-D

VII. Answer any three of the following questions in 20 sentences each. (3x6-18)

36. Explain the movements along the demand curve and shifts in demand curve with the help of two diagrams.
37. Explain the Law of Variable Proportions with the help of a diagram.
38. Suppose the GDP_{MP} of a country in a particular year was Rs.5000 crores. Net Factor Income from Abroad (NFIA) was Rs. 500 crores. The depreciation was Rs. 450 crores and the value of Net Indirect taxes (NIT) was Rs. 300 crores. Complete the following table.

Identities	Values (Rs. in Crores)
GDP_{MP}	5000
GDP_{FC}	
NDP_{MP}	
NDP_{FC}	
GNP_{MP}	
GNP_{FC}	
NNP_{MP}	

39. Write the story of gold smith Lala on the process of deposit and loan (credit) creation by Commercial banks.
40. How the Purchasing Power Parity (PPP) theory is used to make long run prediction of exchange rates in Flexible exchange rate system?

PART-E

VIII. Answer any two of the following project and assignment oriented questions. (2x5=10)

41. A consumer wants to consume two goods, the price of good X_1 is Rs.5 and the price of good X_2 is Rs.10 The consumer's income is Rs.200. Answer the following.

a) How many X_1 goods a consumer can consume if the entire income is spent on that good?

b) How many X_2 goods a consumer can consume if the entire income is spent on that good?

c) Is the slope of budget line downward or upward?

d) Are the bundles on the budget line equal to the consumer income or not?

e) If consumer wants to have more of X_1 good, X_2 good has to be given up. Is it true?

42. Draw a diagram for the following table and identify the equilibrium point, equilibrium price, equilibrium quantity, excess demand and excess supply in the diagram.

P	QD	QS
1	25	5
2	20	10
3	15	15
4	10	20
5	5	25

43. Find out the missing values in the following table.

Production Levels	Total Production	Intermediate Goods used	Value Added
Wheat (Farmer)	700	0	---
Flour (A Miller)	---	700	200
Bread (Baker)	1200	---	300
Retail Shop (Seller)	---	1200	300
Gross Value Added (GVA)			---

Part-F

For Visually challenged students only

42. Give the meaning of market equilibrium, equilibrium price, equilibrium quantity, excess demand and excess supply.

43. Expand GDP_{MP}, NDP_{MP}, GNP_{FC}, NNP_{MP} and NNP_{FC}.

****